**ಗಂಗಾ ಕಲ್ಯಾಣ ಯೋಜನೆಯಡಿ DBT ಮೂಲಕ ಅನುಷ್ಠಾನಗೊಳಿಸಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಹಾಗೂ ಅಧ್ಯಕ್ಷರು, ಎಂಪ್ಯಾನೇಲ್‌ಮೆಂಟ್ ಸಮಿತಿ ಇವರ ನಡುವಳಿ.**

ವಿಷಯ: 2022-23ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಅಧೀನದ ವಿವಿಧ ಅಭಿವೃದ್ಧಿ ನಿಗಮಗಳು ಮತ್ತು ಪರಿಶಿಷ್ಟ ಪಂಗಡಗಳ ಇಲಾಖೆಯ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಅನುಷ್ಠಾನ ಮಾಡುತ್ತಿರುವ ಗಂಗಾ ಕಲ್ಯಾಣ ಯೋಜನೆಯನ್ನು DBT ಪದ್ಧತಿ ಮುಖಾಂತರ ಅನುಷ್ಠಾನಗೊಳಿಸಲು ಕೊಳವೆಬಾವಿ ಕೊರೆಯುವ ಗುತ್ತಿಗೆದಾರರನ್ನು ಜಿಲ್ಲಾವಾರು ಎಂಪ್ಯಾನೆಲ್‌ಮೆಂಟ್ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಸಕಇ 399 ಎಸ್‌ಡಿಸಿ 2022 ದಿನಾಂಕ:14.06.2022
2. ಟೆಂಡರ್ ಅಧಿಸೂಚನೆ ದಿನಾಂಕ: 22.07.2022
3. ಎಂಪ್ಯಾನೆಲ್‌ಮೆಂಟ್ ಸಮಿತಿಯ ಸಭೆಯ ದಿನಾಂಕ:01.10.2022, ದಿನಾಂಕ:05.12.2022 & ದಿನಾಂಕ:12.12.2022 ರ ನಡುವಳಿಗಳು.

*****

<u>**ಪ್ರಸ್ತಾವನೆ:**</u>

ಉಲ್ಲೇಖ 1ರ ಸರ್ಕಾರದ ಆದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದ ವಿವಿಧ ಅಭಿವೃದ್ಧಿ ನಿಗಮಗಳು ಮತ್ತು ಪರಿಶಿಷ್ಟ ಪಂಗಡಗಳ ಇಲಾಖೆಯ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಅನುಷ್ಠಾನ ಮಾಡುತ್ತಿರುವ ಗಂಗಾ ಕಲ್ಯಾಣ ಯೋಜನೆಯನ್ನು DBT ಪದ್ಧತಿ ಮೂಲಕ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಸದರಿ ಆದೇಶದಲ್ಲಿ Expression Of Intrest (EOI) ಮೂಲಕ ಕೊಳವೆ ಬಾವಿಗಳನ್ನು ಕೊರೆಯುವ ಹಾಗೂ ಪಂಪ್ ಸೆಟ್ ಸರಬರಾಜು ಮಾಡುವ ಗುತ್ತಿಗೆದಾರರನ್ನು Empanelment ಮಾಡಲು ಸೂಚನೆ ನೀಡಲಾಗಿರುತ್ತದೆ. ಘಟಕ ವೆಚ್ಚವನ್ನು ಫಲಾನುಭವಿಗಳಿಗೆ DBT ಪದ್ಧತಿ ಮೂಲಕ ಪಾವತಿಸಲು ಆದೇಶಿಸಲಾಗಿದೆ ಹಾಗೂ ಈ ಬಗ್ಗೆ ಅಗತ್ಯ ತಂತ್ರಾಂಶ ಸಿದ್ಧಪಡಿಸಲು ಸೂಚನೆ ನೀಡಲಾಗಿರುತ್ತದೆ.

ಸದರಿ ಆದೇಶದಲ್ಲಿ ಗಂಗಾಕಲ್ಯಾಣ ಯೋಜನೆಯನ್ನು ಡಿಬಿಟಿ ಮೂಲಕ ಅನುಷ್ಠಾನ ಮಾಡುವ ಕುರಿತು ಕೊಳವೆಬಾವಿ ಕೊರೆಯುವ, ಕೊರೆದ ಕೊಳವೆಬಾವಿಗಳಿಗೆ ಪಂಪು, ಮೋಟಾರು ಮತ್ತು ಇತರೆ ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಲು ಗುತ್ತಿಗೆದಾರರನ್ನು ಎಂಪ್ಯಾನಲ್‌ಮೆಂಟ್ ಮಾಡಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಎಂಪ್ಯಾನಲ್‌ಮೆಂಟ್ ಸಮಿತಿಯನ್ನು ರಚಿಸಲಾಗಿರುತ್ತದೆ. ಇದೇ ರೀತಿ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಆಧ್ಯಕ್ಷತೆಯಲ್ಲಿ ಸಲಹಾ ಸಮಿತಿ ರಚಿಸಲಾಗಿರುತ್ತದೆ. ಈ ಎರಡು ಸಮಿತಿಗಳಿಗೆ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ಅದರಂತೆ, ಕಾರ್ಯಪಾಲಕ ಅಭಿಯಂತರು, ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು, ಇವರು ದಿನಾಂಕ 22.07.2022 ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮಗಳು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಯುವ ಗುತ್ತಿಗೆದಾರರನ್ನು ನೇಮಕ ಮಾಡಿಕೊಳ್ಳಲು ಟೆಂಡರ್ ಆಹ್ವಾನಿಸಿರುತ್ತಾರೆ.

2021-22 ಮತ್ತು 2022-23ಗೆ ಸಂಬಂಧಿಸಿದಂತೆ ಒಟ್ಟು 17729 ಕೊಳವೆ ಬಾವಿಗಳನ್ನು ಕೊರೆಯಬೇಕಾಗಿರುತ್ತದೆ. ಗುರಿಗಳು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

1) ಡಾ. ಬಿ. ಆರ್. ಅಂಬೇಡ್ಕರ್ ಅಬಿವೃಧ್ಧಿ ನಿಗಮ- 5164
2) ಕರ್ನಾಟಕ ಆದಿಜಾಂಬವ ಅಬಿವೃಧ್ಧಿ ನಿಗಮ-4059
3) ಕರ್ನಾಟಕ ತಾಂಡ ಅಬಿವೃಧ್ಧಿ ನಿಗಮ-1724.
4) ಕರ್ನಾಟಕ ಭೋವಿ ಅಬಿವೃಧ್ಧಿ ನಿಗಮ- 2032
5) ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃಧ್ಧಿ ನಿಗಮ-4750
   ಒಟ್ಟು 17729

ರಾಜ್ಯ ಮಟ್ಟದಲ್ಲಿ ಇ-ಪ್ರಾಕ್ಯೂರಮೆಂಟ್ ಮೂಲಕ ಆಹ್ವಾನಿಸಲಾದ ಟೆಂಡರ್‌ನಲ್ಲಿ ಒಟ್ಟು76 ಗುತ್ತಿಗೆದಾರರು ತಮ್ಮ ಬಿಡ್‌ಗಳನ್ನು ಸಲ್ಲಿಸಿರುತ್ತಾರೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ:05.09.2022 ರಂದು ತೆರೆಯಲಾಗಿರುತ್ತದೆ.

ಎಂಪ್ಯಾನಲ್‌ಮೆಂಟ್ ಸಮಿತಿಯು ದಿನಾಂಕ:01.10.2022 ಸಭೆ ಸೇರಿ ಬಿಡ್‌ದಾರರ ತಾಂತ್ರಿಕ ಬಿಡ್‌ಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗಿರುತ್ತದೆ. ಒಟ್ಟು 76 ಬಿಡ್‌ಗಳಲ್ಲಿ 37 ಬಿಡ್‌ದಾರರು ತಾಂತ್ರಿಕ ಬಿಡ್ ನಲ್ಲಿ ಅರ್ಹರಾಗಿರುತ್ತಾರೆ. ಉಳಿತ 39 ಬಿಡ್‌ದಾರರು ಅರ್ಹರಾಗಿರುವುದಿಲ್ಲ. ಅದರ ಪೈಕಿ 25 ಅನರ್ಹ ಬಿಡ್‌ದಾರರು ಎಂಪ್ಯಾನಲ್‌ಮೆಂಟ್ ಸಮಿತಿಯ ನಿರ್ಣಯದ ವಿರುದ್ಧ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಮೇಲ್ಮನವಿ ಸಲ್ಲಿಸಿರುವ ಮೇರೆಗೆ ಸದರಿ ಮೇಲ್ಮನವಿ ಪ್ರಾಧಿಕಾರಿಗಳು ವಿಚಾರಣೆ ನಡೆಸಿ 10 ಗುತ್ತಿಗೆದಾರರ ಬಿಡ್‌ಗಳನ್ನು ಅಂಗೀಕರಿಸಿ ಆದೇಶಿಸಿರುತ್ತಾರೆ. ಅದರಂತೆ, ಒಟ್ಟು 47 ಗುತ್ತಿಗೆದಾರರು 27 ಜಿಲ್ಲೆಗಳಿಗೆ ಮಾತ್ರ ಅರ್ಹರಿರುತ್ತಾರೆ. ಕಾರಣ ಸದರಿ ಬಿಡ್‌ದಾರರು ಆರ್ಥಿಕ ಬಿಡ್ ಗಳನ್ನು ದಿನಾಂಕ: 19.10.2022 ತೆರೆಯಲಾಗಿದೆ., ದಿನಾಂಕ:05.12.2022 ಮತ್ತು ದಿನಾಂಕ:12.12.2022 ರಂದು ಎಂಪ್ಯಾನೆಲ್‌ಮೆಂಟ್ ಸಮಿತಿಯಿಂದ ದರ ಸಂಧಾನ ನಡೆಸಿ ಜಿಲ್ಲಾವಾರು ದರಗಳನ್ನು ಅಂತಿಮಗೊಳಿಸಿರುತ್ತದೆ.

ಉಳಿದ 3 ಜಿಲ್ಲೆಗಳಿಗೆ (ಕೊಡಗು, ಉಡುಪಿ & ಉತ್ತರಕನ್ನಡ) ಕೊಳವೆ ಬಾವಿ ಕೊರೆಯುವ ಯಾವುದೇ ಅರ್ಹ ಗುತ್ತಿಗೆದಾರರು ಇರುವುದಿಲ್ಲ. ಆದ್ದರಿಂದ, 3 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮರು ಟೆಂಡರ್ ಕರೆಯಲಾಗಿದ್ದು, ಈ 3 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಎಂಪ್ಯಾನೆಲ್‌ಮೆಂಟ್ ಬಗ್ಗೆ ಪರಿಶೀಲಿಸಿ ಸೂಕ್ತ ಆದೇಶವನ್ನು ಹೊರಡಿಸಲಾಗುವುದು.

ಪ್ರಸ್ತುತ 27 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ಕೊಳವೆಬಾವಿ ಕೊರೆಯುವ ಗುತ್ತಿಗೆದಾರರನ್ನು ಟೆಂಡರ್ ಷರತ್ತುಗಳನ್ವಯ ಎಂಪ್ಯಾನೆಲ್‌ಮೆಂಟ್ ಮಾಡುವ ಕುರಿತು ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

## ಆದೇಶ

ಸಂಖ್ಯೆ:ಅಂಅನಿ/ಗಂಕಯೋ/DBT/ಎಂಪ್ಯಾನೆಲ್‌ಮೆಂಟ್/2022-23 ದಿನಾಂಕ:26.12.2022

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2022-23ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಡಾ. ಬಿ. ಆರ್. ಅಂಬೇಡ್ಕರ್ ಅಬಿವೃಧ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಬಿವೃಧ್ಧಿ ನಿಗಮ, ಕರ್ನಾಟಕ ತಾಂಡ ಅಬಿವೃಧ್ಧಿ ನಿಗಮ, ಕರ್ನಾಟಕ ಭೋವಿ ಅಬಿವೃಧ್ಧಿ ನಿಗಮ ಮತ್ತು ಪರಿಶಿಷ್ಟ ಪಂಗಡಗಳ ಇಲಾಖೆಯ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃಧ್ಧಿ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು DBT ಮುಖಾಂತರ ಅನುಷ್ಠಾನಗೊಳಿಸಲು ಜಿಲ್ಲಾವಾರು ಕೊಳವೆ ಬಾವಿ ಕೊರೆಯುವ ಗುತ್ತಿಗೆದಾರರನ್ನು 27 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅನುಬಂಧ-1 ರಿಂದ 27 ರಲ್ಲಿ ವಿವರಿಸಿದಂತೆ ಎಂಪ್ಯಾನೆಲ್‌ಮೆಂಟ್ ಮಾಡಿ ಆದೇಶಿಸಿದೆ.

26/12